ದಿವಾಳಿಯಾದ ಡಿಕ್ರೀ ದೇಣೇದಾರ ನಿವಾಚಾರದ ಜಾತಿ ಕೆರಹಳ್ಳಿ ಮಾದಯ್ಯನ ವಿಷಯವಲ್ಲಿ—

ಸ್ರ 1889ನೇ ಇಸವಿ ದಿವಾಳಿ ಕೇಸ್ ನಂಬರು 34.

502

ಹುಕುಂ.

ಮೇಲ್ಕಂಡ ಮಾದಯ್ಯನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟು ರೂಬರೂ ಅರ್ಜೀದಾರನಾದ ಮಾದಯ್ಯನ ಪರವಾಗಿ ಫಸ್ಟ್ ಗ್ರೇಡ್ ಪ್ಲೀಡರ್ ನಾರಾಯಣರಾಯರನ್ನೂ ಮತ್ತು ಸದರೀಯವನ ಲೇಣೇದಾರ್ರಾದವರುಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತೀ ನೋಟಿಸು ಜಾರಿಯಾದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ—1 ಗಂಜಾಂ ರಂಗಣ್ಣ.

ಸಿವಿಲ್ ಪ್ರೊಸೀಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ್ನ ಸದರೀ ಕೆರಹಳ್ಳೀ ಮಾದಯ್ಯನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆದುಾಗಿ ಸದರೀ ದಿವಾಳಿಯಾದವನ್ನ್ನ ನಿರ್ಬಂಧದಿಂದ ವಿಮೋಚನೆಮಾಡಿರುವದಲ್ಲದೆ ಅದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಸ್ತರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನನ್ನ್ನ ನಿರಾಲಸ್ ಮಾಡಲಾಗಿರುತ್ತೆ ಯೆಂದು ಯಿದರಿಂದ ಹುಕುಂಮಾಡಲ್ಪಟ್ಟಿರುತ್ತೆ.

ಸ್ರ 1889ನೇ ಇಸವಿ ಮಾರ್ಚಿ 13ನೇ ತಾರೀಖಿನಲ್ಲಿ ಈ ಕೋರ್ಟು ಮೊಹರು ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲಿ ತಿಯಾಬಂದ ಅವರುಗಳ ವಾಸಸ್ಥಳ.	ಜೊಬಲಗು.	ಯಾವಾಗದಕ್ಕೆ ಹುಟ್ಟಿಪಟ್ಟದ್ದು	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀ ಯೇನಾದರೂ ಇದ್ದರೆ.	ಷರಾ.
1	ಗುಂಡ್ಲಿನಲ್ಲಿರುವ ಗಂಜಾಂ ರಂಗಣ್ಣ ..	91 0 6		ಡಿಕ್ರೀ ಬಾಬತು	

ಸಿ. ಶ್ರೀನಿವಾಸಯ್ಯಂಗಾರ್,
ಸಬ್ ಜಡ್ಜ್.

ಕಡೂರು ಡಿಸ್ಟ್ರಿಕ್ಟು.

ತಾರೀಖು 14ನೇ ಮಾರ್ಚಿ 1889.

ಕಡೂರು ಡಿಸ್ಟ್ರಿಕ್ಟು ಮೂಡಿಗೆರೆ ತಾಲ್ಲೂಕು ಸಬ್ ರಜಿಸ್ಟ್ರಾರವರ ಆಫೀಸಿನಲ್ಲಿ ಈ ಕೆಳಗೆ ನಮೂದಿಸಿರುವ ಬೇವಾರಸಿ ದಸ್ತಾವೇಜುಗಳನ್ನು ಕ್ರಮ ಪ್ರಕಾರ ವಾರಸ್‌ದಾರರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕರಾಗಲಿ ಈ ತಾರೀಖು ಲಾಗಾಯತು ಒಂದು ತಿಂಗಳವಳಗಾಗಿ ವಾಪಸು ಪಡೆಯಬೇಕು, ತಪ್ಪಿದರೆ 1877ನೇ ಇಸವಿ IIIನೇ ನಂಬರ್ ಇಂಡಿಯ್ಯ ರಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಪ್ರಕಾರ ನಾಶಪಡಿಸಲ್ಪಡುತ್ತೆ.

ದಸ್ತಾವೇಜಿನ ನಂಬರ್.	ದಸ್ತಾವೇಜನ್ನು ಬರದುಕೊಟ್ಟವರ ಹೆಸರು.	ದಸ್ತಾವೇಜನ್ನು ಬರಸಿ ಕೊಂಡವರ ಹೆಸರು.	ದಸ್ತಾವೇಜು ಹುಟ್ಟಿದ ತಾರೀಖು.	ದಸ್ತಾವೇಜು ರಜಿಸ್ಟ್ರೇಷನ್ ಆಗಬೇಕಾದ ಹುಟ್ಟಿದ ತಾರೀಖು.	ದಸ್ತಾವೇಜು ರಜಿಸ್ಟ್ರೇಷನ್ ಮಾಡಲ್ಪಟ್ಟ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
1ನೇ ಬುಕ್ಕು 83 1886—87	ಲಿಂಗೇಗೌಡ ಚಿಕ್ಕ ಮಗಳೂರು ತಾ|| ಬಿದ್ರನಾಡು ಮಾಗಣಿ ಸಕ್ಕೇಪಳ್ಳಿ ವಾಸಸ್ತ	ಮುದ್ದಪ್ಪ ಹೆಬ್ಬಾ ಕುವ್ವೆ ಗ್ರಾಮ ನಾಗಂಮಚ್ಚಿ ತೋಟದ ವಾಸಸ್ತಾ ಮೂಡಿಗೆರೆ ತಾಲ್ಲೂಕು	3 3 87 3 3 87	7 3 87 7 3 87	7 3 87 7 3 87	ಬರದುಕೊಟ್ಟವನು ತನ್ನ ಬಾಬತು ಮೂಡಿಗೆರೆ ತಾಲ್ಲೂಕು ಮೇಲುಬಂಗಾಡಿ ಮಾಗಣಿ ಕುವ್ವೆ ಗ್ರಾಮದ ಸರ್ವೆ ನಂ. 22ನೇ ತರೀ ಜಮೀನು ಬರಸಿಕೊಂಡವರಿಗೆ 90 ರೂಪಾಯಿಗೆ ಖುದ್ದ್ರಕ್ರಯಕ್ಕೆ ಕೊಟ್ಟಂತೆ ನಮೂದಾಗುವ ಕ್ರಯಪತ್ರ.
1ನೇ ಬುಕ್ಕು 85 1886—87	ರಾಮೇಗವೆಡ, ಮೂಡಿಗೆರೆ ತಾಲ್ಲೂಕು ಮೇಲಬಂಗಾಡಿ ವಾಗಣಿ ಮೇಗೂರು ಗ್ರಾಮದ ವಾಸಸ್ತ	ಚೆನ್ನೆಗೌಡ ಮೂಡಿಗೆರೆ ತಾಲ್ಲೂಕು ಮೇಲುಬಂಗಾಡಿ ವಾಗಣಿ ದರ್ಗದ ಹಳ್ಳಿ ಗ್ರಾಮದವಾಸಸ್ತಾ	4 2 87	ಜಿತೋ	ಜಿತೋ	ಈ ದಸ್ತಾವೇಜು ಬರದುಕೊಟ್ಟವನು ತನ್ನ ಬಾಬತು ಮೇಗೂರು ಗ್ರಾಮವ ಸರ್ವೆ ನಂಬರ್ 1ನೇ ಕಾಫಿ ಸ್ಥಳವನ್ನು ಬರಸಿಕೊಂಡವರಿಗೆ ಸ್ವಲ್ಪವೇಕಾದ ಲೇವಾದೇವಿ ಬಾಕಿ ರೂಪಾಯಿ 200ಕ್ಕೆ ಭೋಗ್ಯಕ್ಕೆ ಕೊಟ್ಟಂತೆ ನಮೂದಾಗುವ ಪತ್ರ.

ಜಿ. ಜಿ. ಮೈಕಲ್‌ಜ್ಞಾ, ರಜಿಸ್ಟ್ರಾರ್.